S C.R.P.67

Form No.4
(Criminal)
Deposition
Sheets
(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ 34/2025

**ಚಾ.ಸಾ.–02 ಪ್ರಾ.ಸಾ.–02**

| | |
|---|---|
| **ಸಾಕ್ಷಿದಾರರ ಹೆಸರು** | **ಜಯಮ್ಮ** |
| **ತಂದೆಯ ಹೆಸರು** | **ವೆಂಕಟೆಗೌಡ** |
| **ವಯಸ್ಸು** | **62 ವರ್ಷಗಳು** |
| **ಉದ್ಯೋಗ** | **ಟೈಲರ್** |
| **ವಾಸ** | **ತಾವರೆಗೆರೆ , ಮನೇಶ್ವರ ದೇವಸ್ಥಾನ ಮುಂದೆ ಮಂಡ್ಯ ತಾಲ್ಲೂಕು** |

**ದಿನಾಂಕಃ 23.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸ 1ರವರ ಪರಿಚಯ ಇದೆ. ಚಾಸಾ 1ರವರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ಆರೋಪಿಯ ಪರಿಚಯ ಇದೆ. ಅವರು ಒಕ್ಕಲಿಗರಾಗಿದ್ದಾರೆ. ಚಾಸಾ 3 ರಿಂದ 6 ರವರು ಪರಿಚಯ ಇದ್ದಾರೆ. ಚಾಸಾ 1ರವರ ಸೈಟು ನನ್ನ ಅಕ್ಕನ ಸೈಟಿನ ಬಳಿಇರುತ್ತದೆ. ನಾನು ಆಗಾಗ ನನ್ನ ಅಕ್ಕನ ಸೈಟಿನ ಬಳಿ ಹೋಗಿ ಬರುತ್ತೇನೆ. ದಿಃ 20.12.2024ರಂದು ನನ್ನ ಅಕ್ಕನ ಸೈಟಿನ ಬಳಿ 4.30 ಸಮಯದಲ್ಲಿ ಹೋಗಿದೆ. ಚಾಸಾ 1 ರಿಂದ 4 ರವರು ಅಲ್ಲಿದ್ದರು. ಚಾಸಾ 1 ರವರು ಅಲ್ಲಿ ಒಂದು ಕೋರ್ಟ್ ಬೋರ್ಡ್ ನೆಟ್ಟಿದ್ದರು ಅದನ್ನು ಆರೋಪಿ ಕೀಳುತ್ತಿದ್ದರು. ಆಗ ಚಾಸಾ 1ರವರು ಅದನ್ನು ಕೀಳಬೇಡ ಎಂದು ಹೇಳಿರುತ್ತಾರೆ. ಆಗ ಆರೋಪಿ ಇದು ನಿಮ್ಮಪ್ಪಂದ , ಅದು ನಮ್ಮಪ್ಪಂದು ನೀನು ಹೊಲೆಯ ನನ್ನ ಮಗನೆ ಎಂದು ಬೈದು ನಾನು ಸೈಟನ್ನು ಮಾರೆ ಮಾರುತ್ತೇನೆ ಎಂದು ಹೇಳಿ ಹಾಕಿದ್ದ ಬೋರ್ಡನ್ನು ಕಿತ್ತು ಹಾಕಿರುತಾ್ತನೆ. ಆರೋಪಿ

ನಿನ್ನ ತಾಯಿ ಅವ್ವ ಅಂತ ಬೈದಿದ್ದಾನೆ. ನಂತರ ನಾವು ಗಲಾಟೆ ಬಿಡಿಸಿದೆವು. ನಂತರ ಚಾಸಾ 1 ದೂರು ಕೊಟ್ಟಿರುತ್ತಾರೆ. ಆರೋಪಿ ಸ್ಥ.ಳದಿಂದ ಓಡಿಹೋಗಿರುತ್ತಾರೆ. ಅದನ್ನು ಪೊಲೀಸರಿಗೆ ಹೇಳಿದ್ದೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ**

**ಸಮಯಾವಕಾಶ ಕೋರಿರುತ್ತಾರೆ. 500 ಖರ್ಚು ಕೊಡುವ ಆದೇಶದ ಮೇರೆಗೆ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ